ದಿನಾಂಕ **: 30.06.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎನ್.ಎಸ್.ಎನ್., ಪ್ರತಿವಾದಿ ಪರ ವಕೀಲರಿಂದಃ

ನಾನು ಕೇರಳದ ಕಾಸರಗೋಡಿನಲ್ಲಿ ವಾಸವಾಗಿದ್ದೇನೆ. ದಾವಾ ಸ್ವತ್ತಿನಿಂದ ಕಾಸರಗೋಡು ಅಂದಾಜು 100 ಕಿಲೋ ಮೀಟರ್ ದೂರದಲ್ಲಿರುತ್ತದೆ. ನಾನು ಮದುವೆಯಾದಾಗಿನಿಂದ ದಾವಾ ಸ್ವತ್ತಿಗೆ ಅಂದರೆ ತಾಯಿ ಮನೆಗೆ ವರ್ಷಕ್ಕೆ 2 ಬಾರಿ ಬರುತ್ತಿದ್ದೆನು.

ಸೊಸೈಟಿಯಲ್ಲಿ ಹಣವನ್ನು ನನ್ನ ತಂದೆ ಇಟ್ಟಿರುತ್ತಾರೆ. ಅದರ ಬಗ್ಗೆ ದಾಖಲೆಯನ್ನು ನನ್ನ ತಂದೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನನ್ನ ಬಳಿ ಅದರ ಬಗ್ಗೆ ದಾಖಲೆಗಳು ಇರುವುದಿಲ್ಲ. ಈಗ ನನಗೆ ವಿಶ್ವ ಕರ್ಮ ಸಹಕಾರ ಬ್ಯಾಂಕ್ ನಲ್ಲಿ ಇರುವಂತಹ ಎಫ್.ಡಿ. ಇಟ್ಟ ಬಗ್ಗೆ ಅರ್ಜಿಯನ್ನು ತೋರಿಸಿದ್ದು, ಅದರಲ್ಲಿ ನನ್ನ ತಾಯಿಯ ಹೆಸರಿದೆ ಎಂದು ಒಪ್ಪಿಕೊಂಡ ಕಾರಣ, ನಿಡಿ - 7 ಎಂದು ಗುರುತಿಸಲಾಯಿತು. ಅದರಲ್ಲಿರುವ ಮೂರು ಸಹಿಗಳು ನನ್ನ ತಾಯಿಯದ್ದಾಗಿರುತ್ತದೆ. ಈಗ ನನಗೆ ತೋರಿಸಿದ ಎರಡು ಎಫ್.ಡಿ ಇಟ್ಟ ಬಗ್ಗೆ ಅರ್ಜಿಗಳನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ ನಿಡಿ - 8 ಮತ್ತು ನಿಡಿ

- 9 ಎಂದು ಗುರುತಿಸಲಾಯಿತು. ನಿಡಿ - 8 ಮತ್ತು ನಿಡಿ - 9 ರಲ್ಲಿ ನನ್ನ ತಾಯಿಯ ಮೂರು ಸಹಿಗಳಿದ್ದು, ಅದರಲ್ಲಿ ನನ್ನ ತಾಯಿಯ ಸಹಿಗಳನ್ನು ಕ್ರಮವಾಗಿ ನಿಡಿ - 8(ಎ) ಮತ್ತು ನಿಡಿ - 9(ಎ) ಎಂದು ಗುರುತಿಸಲಾಯಿತು. ವಿಶ್ವಕರ್ಮ ಸಹಕಾರ ಬ್ಯಾಂಕ್ ಗೆ ನೀಡಿದಂತಹ ಸಹ ಸದಸ್ಯತನದ ಅರ್ಜಿಯನ್ನು ಒಪ್ಪಿಕೊಂಡಿದ್ದು, ಅದನ್ನು ನಿಡಿ - 10 ಎಂದು, ಅದರಲ್ಲಿನ ನನ್ನ ತಾಯಿಯ ಸಹಿಯನ್ನು ನಿಡಿ - 10(ಎ) ಎಂದು ಗುರುತಿಸಲಾಯಿತು. ಮೇಲಿನ ಎಲ್ಲಾ ದಾಖಲೆಗಳಲ್ಲಿ ನಿಡಿ - 7 ರಿಂದ ನಿಡಿ - 10 ರಲ್ಲಿ ನಾಮಿನಿಯಾಗಿ ಅವರ ಮಗ ಬಾಲಸುಬ್ರಹ್ಮಣ್ಯಮ್ ರವರನ್ನು ಮಾಡಿದ್ದಾರೆ ಎಂದರೆ ಸರಿ. ಸದರಿ ಬಾಲಸುಬ್ರಹ್ಮಣ್ಯಮ್ ರವರು 1 ನೇ ಪ್ರತಿವಾದಿಯವರ ಗಂಡ ಎಂದರೆ ಸರಿ. ಸದರಿ ಬ್ಯಾಂಕ್ ನಲ್ಲಿ ನನ್ನ ತಾಯಿಯವರು ಖುದ್ದಾಗಿ ಹೋಗಿ ವ್ಯವಹಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಜೊತೆ ಸಹಕರಿಸಿದ್ದಾರೆ. ಸದರಿ ಅರ್ಜಿಗಳು ಬ್ಯಾಂಕ್ ಗೆ ಸಲ್ಲಿಸಿದ ದಿನಾಂಕಗಳಲ್ಲಿ ನಾನು ನನ್ನ ತಾಯಿಯ ಜೊತೆ ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿಯ ಜೊತೆ ನನ್ನ ತಂದೆ ಬ್ಯಾಂಕ್ ಗೆ ವ್ಯವಹರಣೆಗೆ ಹೋಗಿದ್ದರು ಎಂದು ನನ್ನ ತಂದೆಯೇ ನನಗೆ ತಿಳಿಸಿದ್ದಾರೆ. ಹಾಗೆ ಯಾವ ದಿನಾಂಕ ಮತ್ತು ಇಸವಿಯಂದು ನನಗೆ ತಿಳಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಆದರೆ ಸುಮಾರು 7 – 8 ವರ್ಷದ ಹಿಂದೆ ನನಗೆ ತಿಳಿಸಿದ್ದಾರೆ. ಸದರಿ ನಿಡಿ - 7 ರಿಂದ ನಿಡಿ - 10 ರಲ್ಲಿ ನಮೂದಿಸಿರುವ ಮೊತ್ತವು ನನ್ನ ತಂದೆಯ ನಿವೃತ್ತಿಯಿಂದ ಬಂದ ಹಣಗಳಾಗಿರುತ್ತದೆ. ನನ್ನ ತಂದೆಗೆ ನಿವೃತ್ತಿಯಿಂದ ಬಂದ ಹಣವು ಅವರ ಬ್ಯಾಂಕ್ ಖಾತೆಗೆ ಬಂದಿರುತ್ತದೆ

ಎಂದರೆ ಸರಿ. ನನ್ನ ತಂದೆ 2000 ಅಥವಾ 2001 ರಲ್ಲಿ ನಿವೃತ್ತಿ ಹೊಂದಿರಬಹುದು. ನಿಡಿ - 7 ರಿಂದ ನಿಡಿ - 10 ರಲ್ಲಿ ನಮೂದಿಸಿರುವ ಹಣವನ್ನು ನನ್ನ ತಂದೆ ಬ್ಯಾಂಕ್ ಖಾತೆಯಿಂದ ತೆಗೆದಿದ್ದಾರೆ ಎಂದು ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ತಂದೆ ಹಣ ನೀಡದೇ ಇದ್ದರೂ ಸಹಾ ಮತ್ತು ಅದರ ಬಗ್ಗೆ ಯಾವುದೇ ದಾಖಲೆ ಇರದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಬಾಲಸುಬ್ರಹ್ಮಣ್ಯಮ್ ಒಬ್ಬನೇ ಮಗನಾದ ಕಾರಣ, ಅವರ ಮೇಲೆ ವಿಶೇಷವಾದ ಪ್ರೀತಿ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ನಿಡಿ - 7 ರಿಂದ ನಿಡಿ - 10 ರಲ್ಲಿ ನಮೂದಿಸಿರುವ ಎಫ್.ಡಿಗಳಲ್ಲಿ ಬಾಲಸುಬ್ರಹ್ಮಣ್ಯಮ್ ರವರನ್ನು ನಾಮಿನಿಯಾಗಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಸದರಿ ಎಫ್.ಡಿ ಗಳಿಗೆ ಹಣ ನೀಡಿದ್ದಾರೆ ಎಂದು ಯಾವುದೇ ದಾಖಲೆ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ನನಗೆ ರಾಮಕೃಷ್ಣ ಕ್ರೆಡಿಟ್ ಕೋಪರೇಟಿವ್ ಸೊಸೈಟಿಯಲ್ಲಿ ನೀಡಿದ ಅರ್ಜಿಯಲ್ಲಿ ಇರುವುದು ನನ್ನ ತಾಯಿಯ ಸಹಿ ಎಂದರೆ ನನಗೆ ಗೊತ್ತಾಗುವುದಿಲ್ಲ. ಅದರ ಜೊತೆ ಇರುವಂತಹ 6 ಅರ್ಜಿಗಳಲ್ಲಿ ಇರುವುದು

ನನ್ನ ತಾಯಿಯ ಸಹಿ ಎಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ತಾಯಿಯ ಮೊಬೈಲ್ ಸಂಖ್ಯೆ ನನಗೆ ನೆನಪಿಲ್ಲ. ನನ್ನ ತಾಯಿಯ ಮೊಬೈಲ್ ಸಂಖ್ಯೆ ನನ್ನ ಮೊಬೈಲ್ ನಲ್ಲಿ ಸೇವ್ ಮಾಡಿಕೊಂಡಿರುವುದಿಲ್ಲ. ಸದರಿ ಅರ್ಜಿಗಳಲ್ಲಿ ನನ್ನ ಸಹೋದರ ಬಾಲಸುಬ್ರಹ್ಮಣ್ಯಮ್ ರವರ ಸಹಿಗಳು ಯಾವುದು ಎಂದರೆ ನನಗೆ ಗೊತ್ತಾಗುವುದಿಲ್ಲ. ರಾಮಕೃಷ್ಣ ಕ್ರೆಡಿಟ್ ಕೋಪರೇಟಿವ್ ಸೊಸೈಟಿಯಲ್ಲಿ ನನ್ನ ತಾಯಿ ಮತ್ತು ನನ್ನ ಸಹೋದರ ಜಂಟಿಯಾಗಿ ಎಫ್.ಡಿಗಳನ್ನು ಇಟ್ಟಿದ್ದರು ಎಂದರೆ, ಸದರಿ ಹಣ ನನ್ನ ತಂದೆ ಇಟ್ಟಿರುತ್ತಾರೆ. ಹಾಗೆ ನನ್ನ ತಂದೆ ರಾಮಕೃಷ್ಣ ಕ್ರೆಡಿಟ್ ಕೋಪರೇಟಿವ್ ಸೊಸೈಟಿಯಲ್ಲಿ ಹಣ ಇಟ್ಟಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ತಂದೆಯವರು ಯಾವ ಯಾವ ದಿನಾಂಕದಂದು ಬ್ಯಾಂಕ್ ಗಳಲ್ಲಿ ಹಣ ಇಟ್ಟಿದ್ದಾರೆ ಎಂದು ಹೇಳಲು ನನಗೆ ಈಗ ನೆನಪಿರುವುದಿಲ್ಲ. ಸದರಿ ಹಣವು ನನ್ನ ತಂದೆಯ ನಿವೃತ್ತಿಯ ಹಣದಿಂದ ಬಂದಿದ್ದು, ಅದನ್ನು ಬ್ಯಾಂಕ್ ನಿಂದ ತೆಗೆದಿದ್ದಾರೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಈಗ ನನಗೆ ಒಂದು ಅರ್ಜಿ ತೋರಿಸಿದ್ದು, ಸದರಿ ಅರ್ಜಿಯಲ್ಲಿ ನನ್ನ ತಾಯಿಯ ಫೋಟೋ ಇರುತ್ತದೆ. ಅದರಲ್ಲಿರುವ ಸಹಿ ನನ್ನ ತಾಯಿಯದ್ದೋ ಅಲ್ಲವೋ ಎಂದು ಹೇಳಲು ಆಗುವುದಿಲ್ಲ. ಸದರಿ ಅರ್ಜಿಯನ್ನು ನಿಡಿ - 11 ಎಂದು ಗುರುತಿಸಲಾಯಿತು. ನನ್ನ ತಂದೆಗೆ ನಿವೃತ್ತಿಯಾಗುವಾಗ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ಹಣವನ್ನು ನನ್ನ ತಂದೆಯವರು ಎಲ್ಲೆಲ್ಲಿ ಇಟ್ಟಿದ್ದರು ಮತ್ತು ಎಲ್ಲೆಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಡುವ ಸಮಯದಲ್ಲಿ

ಅವರ ಹೆಸರಿನಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಯಾವ ಯಾವ ಬ್ಯಾಂಕ್ ನಲ್ಲಿ ಎಫ್.ಡಿ ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಅವರಿಗೆ ಸಂಬಂಧಪಟ್ಟ ಎಫ್.ಡಿ.ಗಳನ್ನು, ಅವರ ಹಣವನ್ನು ನಾನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದಂತಹ ಹಣವನ್ನು ಬೇರೆ ಪ್ರತಿವಾದಿಯರು ಪಡೆದಿದ್ದಾರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ತಂದೆಗೆ ಸಂಬಂಧಿಸಿದ ಚರ ಮತ್ತ ಸ್ಥಿರ ಸ್ವತ್ತುಗಳನ್ನು ನಾವುಗಳು ಕೇಳಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿಗಳು ಇರಲಿಲ್ಲ. ಈಗ ಮುಂದುವರಿದು ನನ್ನ ತಂದೆಗೆ ಕಾಸರಗೋಡಿನಲ್ಲಿ ಸುಮಾರು ಒಂದು ಎಕರೆ ಹಾಗೂ ಚಿಲ್ಲರೆ ಸ್ಥಿರಾಸ್ತಿಗಳು ಇರುತ್ತದೆ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.